


ಖರೀದಿಸಲು ಮರೆತಿದ್ದೆ. ಆಗ ನನ್ನಲ್ಲಿ ಭಾವನೆಯ ಅಲೆ ಮೇಲೇಳುತ್ತದೆ. ಇತರ ಹೊತ್ತಿನಲ್ಲಿ ನಾನು ಯಂತ್ರಮಾನವನಾಗುತ್ತೇನೆ. ತಳ್ಳಿಕೊಂಡು ಹೋಗುವ ತಳ್ಳುಗಾಡಿಯಂತೆ ನಾನು ನಡೆಯುತ್ತೇನೆ.

ಇಂಥ ಅಸ್ವಸ್ಥತೆ ಹಿಂದೆಂದೂ ಅನುಭವಿಸಿರಲಿಲ್ಲ. ಬೆಳಿಗ್ಗೆ ಹಾಲು ಬರುತ್ತದೆ. ನಾನು ಬಿಸಿ ಮಾಡುತ್ತೇನೆ. ಚಹ ಮಾಡುವ ಶಕ್ತಿ ಇಲ್ಲ... ಮಾಡಿದರೂ ಕುಡಿಯುವ ಇಷ್ಟವಿಲ್ಲ. ಹಾಲು ಮಧುನ ಮನೆಗೆ ಕಳಿಸಿಕೊಡುತ್ತೇನೆ. ಮನೆಯಲ್ಲಿ ಕಸಗುಡಿಸದೆ ಎಷ್ಟೋ ದಿನಗಳಾದವು. ಮನೆ ತುಂಬ ಅಲ್ಲಲ್ಲಿ ಪತ್ರಿಕೆಗಳು ಹರಡಿ ಬಿದ್ದಿವೆ. ಗೂಟದ ಮೇಲೆ ಕೊಳೆಬಟ್ಟೆಗಳು ತೂಗು ಬಿದ್ದಿವೆ. ದೇವರ ಮುಂದೆ ದೀಪ ಹಚ್ಚಿ ಎಷ್ಟೋ ದಿನಗಳಾಗಿವೆ.

ಹಸಿವು ಕಾಡಿದಾಗ ಖಾನಾವಳಿಗೆ ಹೋಗಿ ಒಂದೆರಡು ತುತ್ತು ನುಂಗುತ್ತೇನೆ. ನನಗನಿಸುತ್ತದೆ ನಾನೇ ಮಾವನ ಮನೆಗೆ ಹೋಗಿ ರೇವತಿಯನ್ನು ಕರೆದುಕೊಂಡು ಬರಬೇಕು. ಆದರೆ ಅವಳು ಅಲ್ಲಿಯೂ ಮೊಂಡುತನ ಮಾಡಿದರೆ? ಅವಳು ತನ್ನ ತವರಿನ ಜನಕ್ಕೆ, ಊರಿನ ಜನಕ್ಕೆ ಏನೇನು ಹೇಳಿದ್ದಾಳೊ... ಇಲ್ಲದಿದ್ದರೆ ಇಷ್ಟು ಹೊತ್ತಿಗೆ ಅವಳ ತಮ್ಮನಾದರೂ ನನ್ನ ಮಾತಾಡಿಸಲು ಬರಬೇಕಿತ್ತು. ಆ ದಿನ ರಾತ್ರಿ ರೇವತಿಗೆ ನಾನು ಸ್ವಾತಿಯ ವಿಷಯ ಹೇಳಬೇಕಿತ್ತು. ಅದಿಲ್ಲದಿದ್ದರೆ ಅವಳನ್ನು ಕರೆದುಕೊಂಡು ಸ್ವಾತಿಯ ಮನೆಗೆ ಹೋಗಿ ಬರಬೇಕಿತ್ತು. ಇಷ್ಟು ವರ್ಷ ನಾನು ಈ ಮನೆಯಲ್ಲಿದ್ದೀನಿ, ಈಗ ಇದೇ ಮನೆ ಬಾಯಿ ಹಿಗ್ಗಿಸಿ ನನ್ನನ್ನು ನುಂಗಲು ಹೊರಟಂತಿದೆ.

ಮೂರನೆಯ ದಿನ ರಾತ್ರಿ ಕಾಲಿಂಗ್ ಬೆಲ್ ಸದ್ದಾಯಿತು. ರೇವತಿ ಬಂದಿರಬಹುದೆಂಬ ಸಂಸತದ ಅಲೆಯೊಂದು ನನ್ನ ಸರ್ವಾಂಗವನ್ನು ಸ್ಪರ್ಶಿಸಿ ಹೋಯಿತು.

ನಾನು ಬೆಳಿಗ್ಗೆ ಬೇಗನೆ ಎದ್ದು ಬಾಗಿಲು ತೆರೆದೆ. ಬಾಗಿಲಲ್ಲಿ ಮಧು ನಿಂತಿದ್ದ. ಈಗಲೂ ಅವನು ತಲೆ ಕೆರೆದುಕೊಳ್ಳುತ್ತಿದ್ದ.

'ನಿಮ್ಮ ಹತ್ತಿರ ಸ್ವಲ್ಪ ಕೆಲಸವಿತ್ತು. ನಿಮಗೆ ಈ ಹಿಂದೆ...'

'ಇರಲಿ ಬಿಡು... ಆ ದುಡ್ಡಿನ ವಿಷಯ ಮರೆತು ಬಿಡು' ನಾನಂದೆ. 'ಈಗ ಏನಾಗಬೇಕಾಗಿದೆ ಹೇಳು.'

'ನಾನು ಈಗ ತೊಂದರೆಯಲ್ಲಿದ್ದೇನೆ. ನೀವೇ ನನ್ನನ್ನು ಕಾಪಾಡಬೇಕು.'

'ಏನಾಗಿದೆಯಂತಾದರೂ ಹೇಳು,' ನಾನು ಕೊಂಚ ಗಡುಸಾಗಿಯೇ ಕೇಳಿದೆ.

'ಹೆಂಡತಿ ಜಗಳಾಡಿ ತೌರುಮನೆಗೆ ಹೋದ್ಲು.'

'ಯಾರದ್ದು?' ನಾನು ಆಶ್ಚರ್ಯದಿಂದ ಕೇಳಿದೆ.

'ನನ್ನ ಹೆಂಡ್ತಿ... ಬೆಳಿಗ್ಗೇನೇ ಹೋದ್ಲು.'

ಅಂಥ ಪರಿಸ್ಥಿತಿಯಲ್ಲಿಯೂ ನನಗೆ ನಗು ಬಂತು.

'ನನ್ನದೇ ಸ್ವಲ್ಪ ತಪ್ಪಾಯ್ತು. ರಾತ್ರಿ ಸ್ವಲ್ಪ (ಗುಟುಕು) ಜಾಸ್ತಿಯಾಗಿತ್ತು. ಅವಳು ಸ್ವಲ್ಪ ಗರಂ ಆದಳು. ಏನೇನೊ ಮಾತಾಡಿದಳು. ನನಗೆ ಸಿಟ್ಟು ಬಂತು, ಎರಡೇಟು ಕೊಟ್ಟೆ... ಬೆಳಿಗೆದ್ದು ನೋಡಿದರೆ ಹೆಂಡತಿ ಮನೆಯಲ್ಲಿಲ್ಲ?'

'ನಿನ್ನ ಹೆಂಡ್ತಿಗೆ ಇನ್ಮುಂದೆ ಸರಾಯಿ ಕುಡಿಯುವುದಿಲ್ಲ ಅಂತ ಮಾತು ಕೊಟ್ಟಿದ್ದೆಯಲ್ಲವೆ?'

'ಇಲ್ಲ, ಅವಳು ಹೆಂಡ ಬಿಡು ಅಂತ ಹೇಳಿರಲಿಲ್ಲ. ಹೆಂಡಕ್ಕಾಗಿ ಖರ್ಚು ಮಾಡುವ ಹಣದಲ್ಲಿ ಒಡವೆ ಮಾಡಿಸಿ ಹಾಕು ಅಂತ ಹೇಳಿದ್ದಳು. ಜೊತೆಗೆ ನಾಲ್ಕು ಮಕ್ಕಳಿದ್ದಾರಲ್ಲ?'